ಮೂಲ ದಾವಾ ನಂಃ 28/2024

ಪಿ ಡಬ್ಲುಃ 1.

ಸಾಕ್ಷಿಯನ್ನು ದಿನಾಂಕಃ **07-03-2026** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ 2 ರಿಂದ 10 ನೇ ಪ್ರತಿವಾದಿಯರ ಪರ ಶ್ರೀ. ಆರ್ ಎಂ ಬಿ., ವಕೀಲರಿಂದಃ**

ಈ ದಾವೆಯ ಪ್ರತಿವಾದಿ ನಂ.1 ನನ್ನ ತಮ್ಮ. ಪ್ರತಿವಾದಿ ನಂ.2 ನನ್ನ ದೊಡ್ಡಪ್ಪನ ಹೆಂಡತಿ, ಪ್ರತಿವಾದಿ ನಂ.3 ದೊಡ್ಡಪ್ಪನ ಮಕ್ಕಳು, ಪ್ರತಿವಾದಿ ನಂ.4 ನನ್ನ ಅತ್ತಿಗೆ, ಪ್ರತಿವಾದಿ ನಂ.5 ಮತ್ತು 6 ನನ್ನ ಅಣ್ಣನ ಮಕ್ಕಳು, ಪ್ರತಿವಾದಿ ನಂ.7 ನನ್ನ ಅಣ್ಣನ ಮಗಳು, ಪ್ರತಿವಾದಿ ನಂ.8 ರಿಂದ 10 ನನ್ನ ದೊಡ್ಡಪ್ಪನ ಮಕ್ಕಳು. ನನ್ನ ಹಾಗೂ ಪ್ರತಿವಾದಿಯರ ಮೂಲ ಪುರುಷ ಮಂಜು. ನಮ್ಮ ಕುಟುಂಬದಲ್ಲಿ ಕರ್ವಾ ಗ್ರಾಮ ಹಾಗೂ ಜಲವಳ್ಳಿ ಗ್ರಾಮದಲ್ಲಿ ಆಸ್ತಿ ಇದೆ. ಜಲವಳ್ಳಿ ಗ್ರಾಮದಲ್ಲಿ ಒಟ್ಟು 4 ಸರ್ವೇ ನಂಬರ್ ಗಳು ಬರುತ್ತದೆ. ಕರ್ವಾ ಗ್ರಾಮದಲ್ಲಿ 3 ಸರ್ವೇ ನಂಬರ್ ಗಳು ಬರುತ್ತವೆ. ದಾವೆಯನ್ನು ಹೂಡಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ದಾವೆಯಲ್ಲಿರುವ ಅಂಶ ನನಗೆ ಗೊತ್ತಿದೆ. ದಾವಾ ಅ ಪರಿಶಿಷ್ಟದ ಆಸ್ತಿಯಲ್ಲಿ ಪ್ರತಿವಾದಿ ನಂ.2 ರಿಂದ 10 ರವರಿಗೆ ಅರ್ಧ ಅಂಶ ಇದೆ ಎಂದರೆ ಸರಿ. ದಾವಾ ಬ ಪರಿಶಿಷ್ಟ ಆಸ್ತಿಯಲ್ಲಿ ಪ್ರತಿವಾದಿ ನಂ.2 ರಿಂದ 10 ರವರಿಗೆ ಅರ್ಧ

ಅಂಶ ಇದೆ ಎಂದರೆ ಸರಿ. ಪ್ರತಿವಾದಿ ನಂ.2 ರಿಂದ 10 ನೇಯವರಿಗೆ ಆಸ್ತಿ ವಿಂಗಡಣೆ ಮಾಡಲು ನನಗೇನೂ ತಕರಾರು ಇಲ್ಲ.

**1 ನೇ ಪ್ರತಿವಾದಿ ಪರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

-Sd/-

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**

**ಹೊನ್ನಾವರ.**